# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 52 ಫ್ರಾ.ಸಾ. : 26**

| | | |
|---|---|---|
| ಸಾಕ್ಷಿಯ ಹೆಸರು | : | ವಿನಾಯಕ ನಾಯ್ಕ |
| ತಂದೆಯ ಹೆಸರು | : | ಮಹಾದೇವ ನಾಯ್ಕ |
| ವಯಸ್ಸು | : | 50 ವರ್ಷ |
| ಕೆಲಸ | : | ಪೊಲೀಸ್ ಮುಖ್ಯ ಪೇದೆ, ಭಟ್ಕಳ ನಗರ ಪೊಲೀಸ್ ಠಾಣೆ, |
| ವಾಸ | : | ಭಟ್ಕಳ |

**ದಿನಾಂಕಃ 19-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2013 ರಿಂದ 2019 ರ ವರೆಗೆ ನಾನು ಕದ್ರಾ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ15-02-2014 ರಂದು ಚಾಸಾ-57 ರವರು ನನಗೆ ಒಬ್ಬರು ಕನ್ನಡ ಹಾಗೂ ತಮಿಳು ಭಾಷೆ ಬಲ್ಲ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬರುವಂತೆ ಸೂಚಿಸಿದ್ದು, ಅದರಂತೆ ನಾನು ರಾಜೀವ ನಗರಕ್ಕೆ ಹೋಗಿ, ಅಲ್ಲಿದ್ದ ಚಾಸಾ-21 ರವರನ್ನು ವಿಚಾರಿಸಿ, ಅವರನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತೇನೆ. ಆ ನಂತರ ತನಿಖಾಧಿಕಾರಿಗಳು ನನಗೆ, ಚಾಸಾ-21 ರವರನ್ನು ಕಾರವಾರ ಗ್ರಾಮೀಣ ಠಾಣೆಗೆ ಕರೆದುಕೊಂಡು ಹೋಗಿ, ಅಲ್ಲಿ ತಮಿಳು ಭಾಷೆ ತಿಳಿದಿದ್ದ ಚಾಸಾ-45 ರವರೊಂದಿಗೆ ಗೋವಾದ ಬಾಂಬೊಲಿಯಂ ಆಸ್ಪತ್ರೆಗೆ ಹೋಗಿ, ಅಲ್ಲಿ ದಾಖಲಾಗಿರುವ ಚಾಸಾ-22 ಜಾನಕಿಯವರಿಂದ ಘಟನೆಯ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಬರುವಂತೆ ಸೂಚಿಸಿದ್ದು, ಅದರಂತೆ ನಾನು ಚಾಸಾ-21 ರವರನ್ನು ಚಾಸಾ-45 ರವರ ಬಳಿ ಕರೆದುಕೊಂಡು ಹೋಗಿ, ಆ ನಂತರ ನಾವು ಮೂರೂ ಜನ ಗೋವಾದ ಬಾಂಬೊಲಿಯಂ ಆಸ್ಪತ್ರೆಗೆ ಹೋಗಿ, ಅಲ್ಲಿದ್ದ ಆಸ್ಪತ್ರೆಯ ವೈದ್ಯರ ಬಳಿ ಜಾನಕಿಯವನ್ನು ಮಾತನಾಡಿಸಬಹುದಾ? ಎಂದು ಕೇಳಿದ್ದು, ಅದಕ್ಕೆ ಅವರು ಮಾತನಾಡಬಹುದು, ಆದರೆ ಆಕೆಗೆ ಹೆಚ್ಚಿನ ಒತ್ತಡ ನೀಡುವಂತಿಲ್ಲ ಎಂದು ತಿಳಿಸಿರುತ್ತಾರೆ, ಅದರಂತೆ ನಾವು ಜಾನಕಿಯ ಬಳಿ ಘಟನೆಯ ಬಗ್ಗೆ ವಿಚಾರಿಸಿದಾಗ, ಆಕೆ ಕನ್ನಡ ಹಾಗೂ

ತಮಿಳು ಮಿಶ್ರಿತ ಭಾಷೆಯಲ್ಲಿ "ನಿನ್ನೆ ದಿನ ಸಂಜೆ ನನ್ನ ಗಂಡ ವೇಲು ಮತ್ತು ನನ್ನ ಮಕ್ಕಳಿಬ್ಬರೂ ದೇವಸ್ಥಾನಕ್ಕೆ ಹೋಗಿ, ವಾಪಸು ಮನೆಗೆ ಬಂದು, ಊಟ ಮಾಡಿ, ಕುಳಿತಿದ್ದಾಗ, ನನ್ನ ಗಂಡನ ಮೊಬೈಲ್ ಗೆ ಒಂದು ಕರೆ ಬಂದಿದ್ದು, ನನ್ನ ಗಂಡ ಆ ಕರೆಯನ್ನು ಸ್ವೀಕರಿಸಿ, ಮಾತನಾಡಿ, ನಂತರ ನನ್ನ ಬಳಿ "ಗಿರಿ ನನಗೆ ಕರೆ ಮಾಡಿ, ಮಾತನಾಡುವುದು ಇದೆ, ಹೊರಗೆ ಬಾ" ಎಂದು ಕರೆದಿದ್ದಾನೆ, ಹೋಗಿ ಬರುತ್ತೇನೆ ಎಂದು ಹೇಳಿ ನನ್ನ ಮಗನನ್ನು ಕರೆದುಕೊಂಡು ಮನೆಯಿಂದ ಹೊರಗೆ ಹೋಗಿ, ಸ್ವಲ್ಪ ದೂರದಲ್ಲಿ ನಿಂತು, ಲೈಟ್ ಬೆಳಕಿನಲ್ಲಿ ಮಾತನಾಡುತ್ತಿದ್ದರು, ಅದನ್ನು ನಾವು ನೋಡಿರುತ್ತೇನೆ, ಆ ನಂತರ ನಾನು ಮತ್ತು ನನ್ನ ಮಗಳು ಮನೆಯ ಒಳಗೆ ಬಂದಿರುತ್ತೇವೆ, ಸ್ವಲ್ಪ ಸಮಯದ ನಂತರ ಕರೆಂಟ್ ಹೋಯಿತು, ಆಗ ನಾವು ಚಿಮಣಿ ದೀಪವನ್ನು ಹಚ್ಚಿಕೊಂಡು ಮನೆಯಲ್ಲಿ ಇದ್ದು, ಆ ಸಮಯದಲ್ಲಿ ಯಾರೋ ಮನೆಯ ಬಾಗಿಲನ್ನು ಬಡಿದರು, ಆಗ ನಾನು ಯಾರು ಎಂದು ಕೂಗಿ ಕೇಳಿದಾಗ, ಬಾಗಿಲು ಬಡಿದ ವ್ಯಕ್ತಿಯೂ "ನಾನು ಗಿರಿ" ಎಂದು ಹೇಳಿರುತ್ತಾನೆ, ನಂತರ ನಾನು ಮನೆಯ ಬಾಗಿಲು ತೆಗೆದು, ಚಿಮಣಿ ದೀಪದ ಬೆಳಕಿನಲ್ಲಿ ನೋಡಿದಾಗ, ಮನೆಯ ಬಾಗಿಲಲ್ಲಿ ಗಿರಿ ನಿಂತಿದ್ದನು, ಆ ನಂತರ ಆತ ಮನೆಯ ಒಳಗೆ ಬಂದು, ಅಶ್ವಿನಿಯನ್ನು ನನ್ನ ಜೊತೆ ಕಳುಹಿಸಿಕೊಡು ಎಂದು ಕೇಳಿದ್ದು, ಆಗ ನಾನು ಗಿರಿಗೆ ಅಶ್ವಿನಿಯನ್ನು ಕಳುಹಿಸುವುದಿಲ್ಲ, ಮಲಗುವ ಸಮಯವಾಗಿದೆ ಎಂದು ಹೇಳಿದೆ, ಆಗ ಗಿರಿ ತನ್ನ ಕೈಯಲ್ಲಿ ಹಿಂದೆ ಹಿಡಿದುಕೊಂಡು ಬಂದಿದ್ದ, ಕತ್ತಿಯಿಂದ ನನಗೆ ಹೊಡೆಯಲು ಬಂದಾಗ, ನಾನು ನನ್ನ ಎಡಗೈಯನ್ನು ಅಡ್ಡ ಹಿಡಿದೆ, ಆಗ ನನ್ನ ಕೈ ತುಂಡಾಗಿ ಕೆಳಗೆ ಬಿದ್ದಿರುತ್ತದೆ, ಆಗ ನಾನು ಕೆಳಗೆ ಕುಸಿದು ಬಿದ್ದೆನು, ಅದನ್ನು ನೋಡಿದ ನನ್ನ ಮಗಳು ಅಶ್ವಿನಿ ಬೊಬ್ಬೆ ಹಾಕಿದ್ದು, ಆಗ ಗಿರಿ ತನ್ನ ಕೈಯಲ್ಲಿದ್ದ ಕತ್ತಿಯಿಂದ ಅಶ್ವಿನಿಯ ಕತ್ತಿನ ಹತ್ತಿರ ಹೊಡೆದನು, ಅದನ್ನು ನೋಡಿದ ನಾನು ಮೂರ್ಛೆ ಹೋಗಿ ಬಿದ್ದಿರುತ್ತೇನೆ, ಸ್ವಲ್ಪ ಸಮಯದ ನಂತರ ನನಗೆ ಎಚ್ಚರವಾಗಿ ನೋಡಿದಾಗ, ಅಶ್ವಿನಿ ಕೆಳಗೆ ಬಿದ್ದಿದ್ದು, ಆಕೆ ಮೃತಪಟ್ಟಿದ್ದಳು" ಎಂದು ಹೇಳಿದ್ದು, ಅದನ್ನು ಚಾಸಾ–21 ರವರು ನಮಗೆ ಕನ್ನಡದಲ್ಲಿ ಹೇಳಿರುತ್ತಾರೆ. ಆ ನಂತರ ನಾವು ನಮ್ಮ ಠಾಣೆಗೆ ವಾಪಸು ಬಂದು, ಜಾನಕಿ ನಮ್ಮ ಬಳಿ ಹೇಳಿದ ವಿಷಯವನ್ನು ತನಿಖಾಧಿಕಾರಿಗೆ ತಿಳಿಸಿರುತ್ತೇವೆ ಹಾಗೂ ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

2. ನನಗೆ ತಮಿಳು ಭಾಷೆ ಬರುವುದಿಲ್ಲ. ಚಾಸಾ–21 ರವರಿಗೆ ತಮಿಳು ಭಾಷೆ ಬರುತ್ತದೆ ಎಂದು ಯಾವುದೇ ದಾಖಲೆಯನ್ನು ಪಡೆದುಕೊಂಡಿಲ್ಲ. ನಾವು ಬಾಂಬೋಲಿಂ ಆಸ್ಪತ್ರೆಗೆ

ಹೋಗಿ ನೋಡಿದಾಗ ಜಾನಕಿ ವಿಶೇಷ ಕೋಣೆಯಲ್ಲಿ ದಾಖಲಾಗಿದ್ದಳು. ಆಸ್ಪತ್ರೆಯಲ್ಲಿ ದಾಖಲಾದವರನ್ನು ನೋಡಬೇಕಾದರೆ ವೈದ್ಯರು ಬಳಿ ಅನುಮತಿಯನ್ನು ಪಡೆಯಬೇಕಾಗುತ್ತದೆ ಎಂದರೆ ಸಾಕ್ಷಿಯು ನಾನು ಅನುಮತಿಯನ್ನು ಪಡೆದುಕೊಂಡಿಲ್ಲ, ಆದರೆ ಚಾಸಾ-45 ರವರು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ಮಂದಿಗೆ ಅನುಮತಿಯನ್ನು ನೀಡಿದರು ಎಂದು ನನಗೆ ಗೊತ್ತಿಲ್ಲ. ನನಗೆ ಪೋಟೋ ತೆಗೆಯುವ ಹಾಗೂ ವಿಡಿಯೋ ಮಾಡುವ ತರಬೇತಿ ಇರುವುದಿಲ್ಲ. ಜಾನಕಿಯ ವಿಚಾರಣೆ ಮಾಡಲು ವೈದ್ಯರು ಆಕೆಯನ್ನು ತಪಾಸಣೆ ಮಾಡಿ, ಆಕೆ ಹೇಳಿಕೆಯನ್ನು ನೀಡಲು ಸಮರ್ಥಳು ಇರುತ್ತಾಳೆ ಎಂಬ ಬಗ್ಗೆ ನಾವು ಪ್ರಮಾಣ ಪತ್ರವನ್ನು ಪಡೆದಿಲ್ಲ.

3. ಆಸ್ಪತ್ರೆಯಲ್ಲಿ ಜಾನಕಿ ನೀಡಿದ ಹೇಳಿಕೆಯನ್ನು ಬರವಣಿಗೆ ಮಾಡಿರುವುದಿಲ್ಲ ಹಾಗೂ ಪ್ರಯತ್ನವನ್ನೂ ಸಹ ಮಾಡಿರುವುದಿಲ್ಲ. ಅದೇ ರೀತಿ ಯಾವುದೇ ಪಂಚನಾಮೆಯನ್ನೂ ಸಹ ಮಾಡಿರುವುದಿಲ್ಲ. ಜಾನಕಿ ನೀಡಿದ ಹೇಳಿಕೆಯಲ್ಲಿ ಯಾವ ಪದಗಳನ್ನು ಕನ್ನಡದಲ್ಲಿ ಹೇಳಿದಳು ಹಾಗೂ ಯಾವ ಪದಗಳನ್ನು ತಮಿಳ ಭಾಷೆಯಲ್ಲಿ ಹೇಳಿದಳು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಹಾಗೂ ಚಾಸಾ-21, 45 ರವರು ಬಾಂಬೋಲಿಂ ಆಸ್ಪತ್ರೆಗೆ ಹೋಗಿರುವುದಿಲ್ಲ ಹಾಗೂ ಜಾನಕಿ ನಮ್ಮ ಬಳಿ ಘಟನೆಯ ಬಗ್ಗೆ ಯಾವುದೇ ಮಾಹಿತಿಯನ್ನು ಹೇಳಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ, ಈ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ